ದಿನಾಂಕಃ 19.04.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ **5** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಿಂದಃ

6. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆ ಸಲ್ಲಿಸಲು ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಕೊಟ್ಟಿದ್ದೇನೆ ಎಂದರೆ ಸರಿ. ಅಪ್ಪಣ್ಣ ಬಸಪ್ಪ ಗಣಾಚಾರಿ ನನ್ನ ಅಜ್ಜ. ಅವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಅವರಿಗೆ 4 ಜನ ಮಕ್ಕಳು. ಅವರ ಹೆಸರು ಚಂದ್ರಪ್ಪ, ಶಿವಲಿಂಗಪ್ಪ, ಭೀಮಪ್ಪ ಮತ್ತು ಅಪ್ಪರಾಯಪ್ಪ ಆಗಿರುತ್ತವೆ. ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ, ಅವರು ಮೃತಪಟ್ಟಿದ್ದಾರೆ. ಅವರಲ್ಲಿ ಒಬ್ಬರ ಹೆಸರು ಬಸಲಿಂಗವ್ವ ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ಮಲ್ಲಪ್ಪರವರು ನನಗೆ ದೊಡ್ಡಪ್ಪನಾಗಬೇಕು. ಚಂದ್ರಪ್ಪರವರು ನನಗೆ ದೊಡ್ಡಪ್ಪನಾಬೇಕು. ಚಂದ್ರಪ್ಪರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ, ಅವರಿಗೆ ಮಕ್ಕಳು ಇಲ್ಲ. ಶಿವಲಿಂಗಪ್ಪರವರು ನನ್ನ ತಂದೆ. ಅವರಿಗೆ 4 ಜನ ಮಕ್ಕಳು. ಅವರ ಹೆಸರು ಮಲ್ಲವ್ವ, ಬಸಪ್ಪ, ಅಪ್ಪಯ್ಯ ಮತ್ತು ಅಡಿವೆಪ್ಪ. ಬಸಪ್ಪರವರು ನನಗೆ ದೊಡ್ಡ ಅಣ್ಣನಾಗಬೇಕು. ಅವರಿಗೆ ಒಂದು ಹೆಣ್ಣುಮಗು ಇತ್ತು, ಅದು ಮತ್ತು ಅವರ ಹೆಂಡತಿ 7-8 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಬಸಪ್ಪರವರ ಹೆಂಡತಿಯ ಹೆಸರು ಬಸಲಿಂಗವ್ವ. ಸದರಿ ನನ್ನ ಅಣ್ಣನಿಗೆ 3 ಮದುವೆ ಆಗಿದ್ದವು. ಅವರ ಹೆಸರು ಕಲ್ಲವ್ವ, ಗಂಗವ್ವ ಮತ್ತು ಬಸಲಿಂಗವ್ವ ಆಗಿರುತ್ತವೆ. ಬಸಲಿಂಗವ್ವರವರಿಗೆ ಮಾತ್ರ ಹೆಣ್ಣು ಮಗು ಆಗಿತ್ತು, ಉಳಿದವರಿಗೆ ಮಕ್ಕಳು ಆಗಲಿಲ್ಲ. ಅವರು ಈಗ ನನ್ನ ಜೊತೆಯಲ್ಲಿ ಇಲ್ಲ. ಅವರು ಎಲ್ಲಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಈ ದಾವೆಯಲ್ಲಿ ಅವರ ಹೆಂಡತಿಯರನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅದರಲ್ಲಿ ಬಸಲಿಂಗವ್ವ ಮೃತಪಟ್ಟಿದ್ದಾರೆ.

7. ಭೀಮಪ್ಪ ನನಗೆ ಚಿಕ್ಕಪ್ಪನಾಗಬೇಕು. ಅವರಿಗೆ 4 ಜನ ಮಕ್ಕಳು. ಅವರು ರಮೇಶ, ಮಹಾಂತೇಶ, ಶಶಿಕಲಾ ಮತ್ತು ಮತ್ತೊಬ್ಬರ ಹೆಸರು ನೆನಪಿಲ್ಲ. ಅವರನ್ನು ನೀವು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರು ಸಣ್ಣವರಿದ್ದಾಗ ಬಾವಿಯಲ್ಲಿ

ಬಿದ್ದು ಸತ್ತರು ಅವರಿಗೆ ಹೆಂಡತಿ ಮಕ್ಕಳು ಇಲ್ಲ ಎನ್ನುತ್ತಾರೆ. ಅಪ್ಪರಾಯಪ್ಪರವರು ನನಗೆ ಚಿಕ್ಕಪ್ಪನಾಗಬೇಕು. ಅವರಿಗೆ 4 ಜನ ಮಕ್ಕಳು. ಅವರು ಸುರೇಶ, ರಮೇಶ, ರಾಜೇಂದ್ರ ಮತ್ತು ಶಿವಂತಾ ಆಗಿರುತ್ತಾರೆ. ಶಿವಂತಾರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ, ಅವರು ಮೃತಪಟ್ಟಿದ್ದಾರೆ, ಅವರಿಗೆ ಮಕ್ಕಳು ಇಲ್ಲ. ಸರ್ವೇ ನಂ.330 ಜಮೀನಿನ ಒಟ್ಟು ಕ್ಷೇತ್ರ 1 ಎಕರೆ 10 ಗುಂಟೆ ಇರುತ್ತದೆ. ಅದು ಗಣಾಚಾರಿ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಅದರಲ್ಲಿ ನನಗೆ ಮೊದಲು 16 ವರೆ ಗುಂಟೆ ಭಾಗ ಇತ್ತು ಎಂದರೆ ಸರಿ. ನನಗೆ ಅಡಚನೆ ಇದ್ದ ಕಾರಣ ನಾನು ಅದನ್ನು ಅಪ್ಪರಾಯಪ್ಪ ಅಪ್ಪಣ್ಣ ಗಣಾಚಾರಿರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಮೂಲ ಕ್ರಯ ಪತ್ರವನ್ನು ತೋರಿಸಿದ್ದು, ಅದು ನಾನು ಸದರಿ ಜಮೀನನ್ನು ಮಾರಾಟ ಮಾಡಿರುವ ಪತ್ರ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ1 ಎಂದು ಗುರುತಿಸಲಾಯಿತು.

8. ನಾನು ಹಾಜರು ಪಡಿಸಿರುವ ಉತಾರಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ಉತಾರಗಳು ಮತ್ತು ದಾಖಲೆಗಳಲ್ಲಿ ಏನು ಬರೆದಿದೆ ಎಂದು ಓದಲು ನನಗೆ ಬರುತ್ತದೆ ಎಂದರೆ ಸರಿ. ಸರ್ವೇ ನಂ.298 ಜಮೀನನ್ನು ಅಪ್ಪರಾಯಪ್ಪ ಗಣಾಚಾರಿಯವರು ಸ್ವಂತ ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ಹೊಲ ಮಾಡುತ್ತಿದ್ದರು. 5 ಮಂದಿ ನಮ್ಮ ಅಪ್ಪರವರೆಲ್ಲಾ ಮಾಡುತ್ತಿದ್ದರು. ಈ ಅಪ್ಪರಾಯಪ್ಪ ಶಾಲೆ ಕಲಿಯಲು ಹೋಗುತ್ತಿದ್ದರು. ಸಾಕ್ಷಿಗೆ ಒಂದು ಕ್ರಯ ಪತ್ರದ ಮೂಲ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ನಾನು ಕನ್ನಡಕ ತಂದಿಲ್ಲ ಎಂದು ನುಡಿದಿದ್ದು, ಸಾಕ್ಷಿಗೆ ಸದರಿ ದಾಖಲೆಯಲ್ಲಿರುವ ಅಂಶಗಳು ಕಾಣಿಸುವುದಿಲ್ಲವಾ ಎಂದು ನ್ಯಾಯಾಲಯ ಕೇಳಲಾಗಿ ಸಾಕ್ಷಿ ದೊಡ್ಡ ಅಕ್ಷರಗಳು ಕಾಣಿಸುತ್ತವೆ, ಸಣ್ಣ ಅಕ್ಷರಗಳು ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮುಂದಿನ ದಿನಾಂಕದಂದು ಕನ್ನಡಕದೊಂದಿಗೆ ಮುಂದಿನ

ಪಾಟೀಸವಾಲಿಗೆ ಹಾಜರಾಗಬೇಕೆಂದು ಸೂಚಿಸಿ ಮುಂದುವರೆದ ಪಾಟೀಸವಾಲನ್ನು ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ